ತೀರ್ಮಾನಕ್ಕೆ ಬರುವುದು ಬಿಟ್ಟು ಜೂನ್ ತಿಂಗಳಲ್ಲಿ ಸಮಿತಿಗೆ ಚುನಾವಣೆ ಜರುಗಿಸುವುದಾಗಿ ಘೋಷಣೆ ಮಾಡಲಾಗಿದೆ. ರೈತರೇ ಮತದಾರರಾಗಿರುವ ಈ ಚುನಾವಣೆಯಲ್ಲಿ ಮಳೆಯನ್ನೇ ನಂಬಿ ಬೇಸಾಯದ ಕೆಲಸಮಾಡಬೇಕಾದ ಕೃಷಿಕರು ಮಳೆಗಾಲದ ಸಮಯದಲ್ಲಿ ಮತದಾನಕ್ಕೆ ಬರಲು ಖಂಡಿತ ತೊಂದರೆಯಾಗುತ್ತದೆ. ಪರಿಣಾಮವಾಗಿ ಕೂಲಿ ಜನರಿಂದ ಕೆಲಸ ಮಾಡಿಸಿಕೊಳ್ಳುವ, ಆರ್ಥಿಕವಾಗಿ ಅನುಕೂಲಸ್ಥರಾದ ರೈತರು ಮಾತ್ರ ಮತ ನೀಡುತ್ತಾರೆ. ಹೊಲಗಳಲ್ಲಿ ಸ್ವತಃ ದುಡಿಯುವ ರೈತರು ಮತ ನೀಡುವ ಅವಕಾಶದಿಂದ ವಂಚಿತರಾಗುತ್ತಾರೆ. ಆದ್ದರಿಂದ ದಕ್ಷಿಣ ಕನ್ನಡ ಜಿಲ್ಲೆಯ ಎ.ಪಿ ಎಂ.ಸಿ. ಚುನಾವಣೆಯನ್ನು ಆಕ್ಟೋಬರ್ ತಿಂಗಳಿಗೆ ಮುಂದೂಡಬೇಕು. ವಿಭಜನೆ ಮಾಡಿ ಬೇರೆ ಜಿಲ್ಲೆಗಳಲ್ಲಿರುವಂತೆ ಹೆಚ್ಚಿಗೆ ಎ. ಪಿ. ಎಂ. ಸಿ. ಗಳನ್ನು ಸ್ಥಾಪಿಸಬೇಕೆಂದು ಒತ್ತಾಯಿಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್ (ಮಾನ್ಯ ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು).—ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಿಗೆ ಸಂಬಂಧಪಟ್ಟ ಸಚಿವರಿಂದ ಉತ್ತರವನ್ನು ತರಿಸಿ ಕೊಡುತ್ತೇನೆ.

೮) ಕರಾವಳಿಯ ಉದ್ದಕ್ಕೂ ಕಡಲ ಕೊರತದಿಂದ ಬಡ ಬೆಸ್ತರಿಗೆ ತೊಂದರೆಯಾಗಿರುವುದು:

ಶ್ರೀಮತಿ ಮನೋರಮಾ ಮಧ್ವರಾಜ್ (ಉಡುಪಿ).—ದಕ್ಷಿಣ ಕನ್ನಡ ಜಿಲ್ಲೆಯ ಕರಾವಳಿಯ ಉದ್ದಕೂ ಅನೇಕ ವರ್ಷಗಳಿಂದ ಕಡಲ ಕೊರೆತದ ಪರಿಣಾಮವಾಗಿ ತೀರವಾಸಿಗಳಾದ ಬಡಬೆಸ್ತರು ಮತ್ತು ದುರ್ಬಲ ವರ್ಗದವರಿಗೆ ವಿಪರೀತ ತೊಂದರೆಯಾಗಿದೆ. ಜೀವದ ಹಂಗು ತೊರೆದು ಕಡಲಲ್ಲಿ ತೊಳಲಾಡಿ, ದುಡಿದು ಬದುಕುವ ಜನರ ತುಂಡು ಭೂಮಿಯೂ ಕೊರೆತಕ್ಕೀ ಈಡಾಗಿದೆ. ಫಲಬಿಡುವ ತೆಂಗಿನ ಮರಗಳು ಉರುಳಿ ಬೀಳುತ್ತಿವೆ. ವಾಸದ ಮನೆಗಳೂ ನಾಶವಾದ ಸಂದರ್ಭ ಇದೆ ಈ ಕುರಿತು ಕಳೆದ ಕೆಲವು ವರ್ಷಗಳಿಂದ ಸರಕಾರದ ಗಮನವನ್ನು ಜಿಲ್ಲೆಯ ಶಾಸಕರು ಪದೇ ಪದೇ ಸೆಳೆದರೂ, ಯಾವುದೇ ಖಾಯಂ ಪರಿಹಾರ ಆಗಿಲ್ಲ. ಕೇರಳ ರಾಜ್ಯದಲ್ಲಿ ಆದಂತೆ ಇಲ್ಲಿಯೂ ತಡೆ ಗೋಡೆ ರಚಿಸಲ್ಪಟ್ಟಲ್ಲಿ ಕೊರೆತದಿಂದ ರಕ್ಷಣೆ ದೊರಕುತ್ತದೆ. ಇತ್ತೀಚೆಗೆ ಉಡುಪಿ ತಾಲೂಕಿನ ಮಲ್ಪೆಯಲ್ಲಿ ಕೊರೆತ ಸಂಭವಿಸಿತು. ನಷ್ಟಕ್ಕೀಡಾದವರಿಗೆ ಯಾವುದೇ ಪರಿಹಾರ ದೊರೆಕಿಲ್ಲ. ಸರಕಾರದ ದಿವ್ಯ ನಿರ್ಲಕ್ಷ್ಯದಿಂದಾಗಿ ಹಾನಿಗೊಳಗಾದವರಿಗೆ ಸೂಕ್ತ ಪರಿಹಾರ ನೀಡಬೇಕು, ಶಾಶ್ವತ ಸ್ವರೂಪದ ರಕ್ಷಣಾ ತಡೆಗೋಡೆ ರಚಿಸಲು ಶೀಘ್ರ ಕ್ರಮಕೈಗೊಳ್ಳಬೇಕು. ಇದು ಮುಂದಿನ ವರ್ಷವೂ ಬರಿಯ ಆಶ್ವಾಸನೆ ಆಗಿ ಉಳಿಯಬಾರದು ಎಂದು ಸರ್ಕಾರವನ್ನು ನಾನು ಒತ್ತಾಯಿಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಮಂತ್ರಿ).—ಅಲ್ಲಿ ತಾತ್ಕಾಲಿಕ ಕಾಮಗಾರಿಗಳು ಮತ್ತು ಶಾಶ್ವತ ಕಾಮಗಾರಿಗಳನ್ನು ಕೂಡ ಹಂತಹಂತವಾಗಿ ತೆಗೆದುಕೊಳ್ಳಲಾಗುತ್ತಿದೆ. ಉಡುಪಿ ತಾಲ್ಲೂಕಿನ ಮುಳೂರು ಗ್ರಾಮದಲ್ಲಿ ಹೋದ ವರ್ಷ ಸಮುದ್ರ ಕೊರೆತದಿಂದ ನಷ್ಟ ಅನುಭವಿಸಿದ ಬಡವರಿಗೆ ಮಾನ್ಯ ಮುಖ್ಯ ಮಂತ್ರಿಗಳ ಪರಿಹಾರ ನಿಧಿಯಿಂದ ಹಣ ಒದಗಿಸಲಾಗಿದೆ. ಸರ್ವಶ್ರೀ ಕೃಷ್ಣಪ್ಪ ವಿ. ಕರ್ಕೇರ, ಅಮಿಯ ವಿ. ಕರ್ಕೇರ, ಸೋಮಪ್ಪ ಕೊಲಿಯಾನ್ ಮತ್ತು ಶ್ರೀಮತಿ ನರಸಿ ಕಾರ್ಕಳತಿ ಇವರಿಗೆ ತಲಾ ಎರಡು ಸಾವಿರ ಪರಿಹಾರ ಕೊಡಲಾಗಿದೆ. ೧೯೮೭-೮೮ ನೇ ಸಾಲಿನಲ್ಲಿ ಸುಮಾರು ೨೨೦ ಮೀಟರ್ ಉದ್ದದ ಪ್ರದೇಶದಲ್ಲಿ ಸಮುದ್ರದ ಕೊರೆತದ ತಾತ್ಕಾಲಿಕ ರಕ್ಷಣಾ ಕೆಲಸದ ಕಾಮಗಾರಿಗಳನ್ನು ಮಾಡಲಾಯಿತು. ಇಂತಹ ತಾತ್ಕಾಲಿಕ ಕಾಮಗಾರಿಗಳಿಗೆ ಸುಮಾರು ೯೮ ಸಾವಿರ ರೂಪಾಯಿಗಳು ವೆಚ್ಚವಾಗಿದೆ. ಶಾಶ್ವತ ರಕ್ಷಣಾ ಕಾಮಗಾರಿಗಳಿಗೂ ಕೂಡ ರಾಜ್ಯ ಸರ್ಕಾರ ಹಣ ಒದಗಿಸುತ್ತಿದೆ. ನೀರಾವರಿ ಇಲಾಖೆ ಸಮುದ್ರ ಕೊರೆತ ನಿರೋಧ ಧನ ಯೋಜನೆಗಳನ್ನು ರೂಪಿಸಿ ಹಂತಹಂತವಾಗಿ ದಕ್ಷಿಣ ಕನ್ನಡ ಜಿಲ್ಲೆಯ ಕರಾವಳಿ ಪ್ರದೇಶಗಳಲ್ಲಿ ಇದನ್ನು ಕಾರ್ಯಗತಗೊಳಿಸುತ್ತೇವೆ. ೧೯೮೬-೮೭ ನೇ ಸಾಲಿನಲ್ಲಿ ೬೬ ಲಕ್ಷ ರೂಪಾಯಿ ಮತ್ತು ೪೭-೮೮ ನೇ ಸಾಲಿನಲ್ಲಿ ೫೭ ಲಕ್ಷ ರೂಪಾಯಿಗಳನ್ನು ಇಂತಹ ಕಾಮಗಾರಿಗಳಿಗೆ ಖರ್ಚು ಮಾಡಲಾಗಿದೆ. ಪ್ರಸಕ್ತ ಹಣಕಾಸಿನ ಸಾಲಿನಲ್ಲಿ ೭೫ ಲಕ್ಷ ರೂಪಾಯಿಗಳನ್ನು ಸಮುದ್ರ ಕೊರೆತ ನಿರೋಧ ಧನಯೋಜನೆಗೆ ಒದಗಿಸಲಾಗಿದೆ. ಸಮರ್ಪಕವಾದ ಕಾಮಗಾರಿಗಳನ್ನು ಹಂತಹಂತವಾಗಿ ತೆಗೆದುಕೊಳ್ಳಲಾಗುತ್ತಿದೆ.

ಮಾನ್ಯ ಸದಸ್ಯರುಗಳಾದ ಶ್ರೀ ವಿನಯಕುಮಾರ್ ಸೊರಕೆ ಮತ್ತು ಶ್ರೀ ವಸಂತ ವಿ. ಸಾಲಿಯಾನ್ ಅವರುಗಳು ಗೈರು ಹಾಜರಿದ್ದರು.